ಜಯ ಗಣೇಶ
ವಿನಾಯಕ ಚತುರ್ಥಿ ಶುಭ ತರಲಿ...

ಕರ್ನಾಟಕ ಸರ್ಕಾರ

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–08/ಎಇ–2/2020–21/1022 ದಿನಾಂಕ:–20.08.2020

ಇ– ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ–2ನೇ ಕರೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ.–08/ಎಇ–2/2020–21 **ದಿನಾಂಕ: 20.08.2020**

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಜಗಳೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ 5054 ಲೆಕ್ಕಶೀರ್ಷಿಕೆಗಳಡಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಒಟ್ಟು ಸಂಖ್ಯೆ–2, ಕಾಮಗಾರಿಗಳ ಅಂದಾಜು ಮೊತ್ತ ರೂ. 150.00 ಲಕ್ಷ, ಕಾಮಗಾರಿಯ ವಿವರಗಳನ್ನು ಕಚೇರಿ ಸಮಯದಲ್ಲಿ ಮೇಲ್ಕಂಡ ಕಚೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಯ ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

(1) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 29.08.2020 ಸಂಜೆ 4.00 ಗಂಟೆಯವರೆಗೆ. (2) ಟೆಂಡರ್ ತೆರೆಯುವ ದಿನಾಂಕ: 31.08.2020 ಸಂಜೆ 4.30 ಗಂಟೆಯವರೆಗೆ **ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in** ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/286/ಎಂಸಿಎ/2020–21 **ಸಹಿ/– ಕಾರ್ಯಪಾಲಕ ಅಭಿಯಂತರರು**

ಕರ್ನಾಟಕ ಲೋಕ ಸೇವಾ ಆಯೋಗ

''ಉದ್ಯೋಗ ಸೌಧ'' ಬೆಂಗಳೂರು - 560 001

ಸಂಖ್ಯೆ: ಇ(1)2930/2020–21/ಪಿಎಸ್‌ಸಿ ದಿನಾಂಕ: 21.08.2020

ಪ್ರಕಟಣೆ

ಆಯೋಗವು 2017–18ನೇ ಸಾಲಿನ ಗೆಜೆಟೆಡ್ ಪ್ರೊಬೇಷನರ್ 106 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ:24.08.2020ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಪ್ರಸ್ತುತ ರಿಟ್ ಪಿಟಿಷನ್ ಸಂಖ್ಯೆ:9260/2020ರಲ್ಲಿನ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದ ಮೇರೆಗೆ ಸದರಿ ಪರೀಕ್ಷೆಗೆ ಅಂಧ/ದೃಷ್ಟಿಮಾಂಧ್ಯ ಮೀಸಲಾತಿ ಕೋರಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ **ಪ್ರತಿ ಒಂದು ಗಂಟೆಗೆ 20 ನಿಮಿಷ ಹೆಚ್ಚುವರಿ ಸಮಯವನ್ನು** ನೀಡಲಾಗುತ್ತಿದೆ. ಮುಂದುವರೆದು, ಪೂರ್ವಭಾವಿ ಪರೀಕ್ಷೆಗೆ ಸರ್ಕಾರದ ದಿನಾಂಕ:30.10.2007ರ ಆದೇಶದ ಮೇರೆಗೆ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳು ಲಿಪಿಕಾರರನ್ನು ತಾವೇ ಕರೆದುಕೊಂಡು ಬರಬೇಕೆಂದು ನಮೂದಾಗಿರುತ್ತದೆ. ಯಾವುದೇ ಅಭ್ಯರ್ಥಿಯು ಲಿಪಿಕಾರರನ್ನು ಕರೆದುಕೊಂಡು ಬರಲು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಆಯೋಗಕ್ಕೆ ಮಾಹಿತಿ ನೀಡಲು **SMS** ಕಳುಹಿಸಲಾಗಿದೆ. ಇಂತಹ ಅಭ್ಯರ್ಥಿಗಳಿಗೆ ಆಯೋಗದಿಂದ ಲಿಪಿಕಾರರನ್ನು ಒದಗಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು. ಸದರಿ ವಿಷಯದ ಕುರಿತು ತಿದ್ದುಪಡಿಯನ್ನು ಆಯೋಗದ ವೆಬ್‌ಸೈಟ್: **http://kpsc.kar.nic.in/** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಸಹಿ/–
(ಜಿ. ಸತ್ಯವತಿ)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಭಾರತೀಯ ರಿಸರ್ವ್ ಬ್ಯಾಂಕ್

ಮೇಲ್ವಿಚಾರಣಾ ಇಲಾಖೆ (ಎನ್‌ಬಿಎಫ್‌ಸಿ) ಬೆಂಗಳೂರು
www.rbi.org.in

ಸಾರ್ವಜನಿಕ ಪ್ರಕಟಣೆ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಇವರಿಂದ, ಆರ್‌ಬಿಐ ಕಾಯ್ದೆ 1934ರ ಕಲಂ 45-IA ರ ಅಡಿಯಲ್ಲಿ, ಈ ಕೆಳಕಂಡ ಕಂಪನಿಗೆ ಠೇವಣಿ ಸ್ವೀಕರಿಸುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಯ ರೂಪದಲ್ಲಿ ಕಾರ್ಯನಿರ್ವಹಿಸಲು ನೋಂದಣಿ ಪ್ರಮಾಣ ಪತ್ರಗಳನ್ನು ನೀಡಲಾಗಿತ್ತು. ಈಗ ಈ ಕಂಪನಿಯು ಠೇವಣಿ ಸ್ವೀಕರಿಸದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ (ಎನ್‌ಬಿಎಫ್‌ಸಿ) ಯಾಗಿ ಪರಿವರ್ತಿಸಿಕೊಳ್ಳಲು ಸ್ವಯಂಪ್ರೇರಿತವಾಗಿ ಇಚ್ಛಿಸಿದೆ.

ಕೆಳಕಂಡ ಕಂಪನಿಯ ಮನವಿಯನ್ನು ಆರ್‌ಬಿಐ ನಿಂದ ಸ್ವೀಕರಿಸಲಾಗಿದೆ ಹಾಗೂ ಈ ಕಂಪನಿಗೆ ಠೇವಣಿ ಸ್ವೀಕರಿಸದ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಹೊಸದಾಗಿ ನೋಂದಣಿ ಪ್ರಮಾಣ ಪತ್ರವನ್ನು ಕೆಳಗಿನ ವಿವರಗಳೊಂದಿಗೆ ನೀಡಲಾಗಿದೆ.

ಕ್ರಮ ಸಂ.	ಕಂಪನಿಯ ಹೆಸರು	ಸಿಐಎನ್ ಸಂಖ್ಯೆ.	ಆರ್‌ಬಿಐನಿಂದ ಈ ಮೊದಲು ನೀಡಲಾಗಿದ್ದ ನೋಂದಣಿ ಪ್ರಮಾಣಪತ್ರದ (CoR) ಸಂಖ್ಯೆ. ಮತ್ತು ದಿನಾಂಕ.	ಆರ್‌ಬಿಐನಿಂದ ಹೊಸದಾಗಿ ನೀಡಲಾದ ನೋಂದಣಿ ಪ್ರಮಾಣಪತ್ರದ (CoR) ಸಂಖ್ಯೆ. ಮತ್ತು ದಿನಾಂಕ.	ಕಂಪನಿಯ ವಿಳಾಸ
1	ತ್ರಿಕಾಲ್ ಲೀಸಿಂಗ್ ಮತ್ತು ಫೈನಾನ್ಸ್ ಲಿಮಿಟೆಡ್	U85110KA-1992PLC103206	ಸಂ. 02-00081 ದಿನಾಂಕ ಅಕ್ಟೋಬರ್ 22, 2008	ಸಂ. ಬಿ-02-00081 ದಿನಾಂಕ 10ನೇ ಆಗಸ್ಟ್ 2020	ಮಹಿಷಿ ರಸ್ತೆ, ಮಾಲ್ಮಡ್ಡಿ, ಧಾರವಾಡ, ಕರ್ನಾಟಕ - 580007

ಮೇಲೆ ತಿಳಿಸಿರುವ ಕಂಪನಿಯು ಇನ್ನು ಮುಂದೆ ಸಾರ್ವಜನಿಕರಿಂದ ಠೇವಣಿಗಳನ್ನು ಸ್ವೀಕರಿಸಲು ಅಧಿಕಾರ ಹೊಂದಿರುವುದಿಲ್ಲ, ಸಾರ್ವಜನಿಕ ಹಿತಾಸಕ್ತಿಯಿಂದ ಈ ಪ್ರಕಟಣೆಯನ್ನು ನೀಡಲಾಗುತ್ತಿದೆ.

ದಿನಾಂಕ : 22ನೇ ಆಗಸ್ಟ್, 2020 ಸಹಿ/- (ಕೆ ಎಸ್ ಜ್ಯೋತ್ಸ್ನಾ)
ಸ್ಥಳ : ಬೆಂಗಳೂರು ಪ್ರಧಾನ ವ್ಯವಸ್ಥಾಪಕರು

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು

ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು

ನಂ. ಎಫ್‌ಡಿ 01 ಬಿಎಂಬಿ 2020 ದಿನಾಂಕ: 20.08.2020

ಕರ್ನಾಟಕ ಸರ್ಕಾರದ ಸ್ಟಾಕ್ (ಸೆಕ್ಯೂರಿಟಿಗಳು)

ಅಂದಾಜು ಮೊತ್ತ	:	ರೂ.2000 ಕೋಟಿಗಳು (ರೂ.1000 ಕೋಟಿಗಳು - 10 ವರ್ಷಗಳ ಅವಧಿಗೆ) & (ರೂ.1000 ಕೋಟಿ - 13 ವರ್ಷಗಳ ಅವಧಿಗೆ)
ನೀಡುವ ವಿಧಾನ	:	ಪಿಡಿಓ, ಆರ್‌ಬಿಐ, ಮುಂಬಯಿ (ಫೋರ್ಟ್) ಮೂಲಕ ಹರಾಜು,
ಹರಾಜು ದಿನಾಂಕ	:	ಆಗಸ್ಟ್ 25, 2020

ಕರ್ನಾಟಕ ಸರ್ಕಾರವು ಮೇಲ್ಕಂಡ ಸೆಕ್ಯೂರಿಟಿಗಳಿಗೆ ಚಂದಾ ಆಹ್ವಾನಿಸುತ್ತಿದೆ. ನೋಟಿಫಿಕೇಷನ್‌ನ ಪ್ರತಿಗಳು ಮತ್ತು ಅರ್ಜಿ ನಮೂನೆಗಳನ್ನು ಪಿಡಿಓ, ಆರ್.ಬಿ.ಐ, ಬೆಂಗಳೂರು ಇವರಿಂದ ಪಡೆದುಕೊಳ್ಳಬಹುದು. ರಿಟೇಲ್ ಹೂಡಿಕೆದಾರರನ್ನು ಪ್ರೋತ್ಸಾಹಿಸಲು ಆರ್‌ಬಿಐ ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯವನ್ನೂ ಕಲ್ಪಿಸಿದೆ. ಪ್ರಕಟಣೆಯಲ್ಲಿ ತಿಳಿಸಿದ ಕರ್ನಾಟಕ ಸರ್ಕಾರದ ಸ್ಟಾಕ್ ಮೊತ್ತದ ಶೇಕಡ 10 ರಷ್ಟು ಮೊತ್ತದ ಸ್ಟಾಕ್‌ಗಳನ್ನು ಅರ್ಹ ವ್ಯಕ್ತಿಗಳು ಮತ್ತು ಸಂಸ್ಥೆಗಳಿಗೆ ಹಂಚಿಕೆ ಮಾಡಲಾಗುವುದು. ಮಾದರಿ ಟೆಂಡರ್ ನಮೂನೆಗಳು ಮತ್ತು ಸ್ಪರ್ಧಾತ್ಮಕವಲ್ಲದ ಬಿಡ್ಡಿಂಗ್ ಸೌಲಭ್ಯದ ಪರಿಷ್ಕೃತ ಯೋಜನೆಯ ಮಾಹಿತಿಯು ವೆಬ್‌ಸೈಟ್ **www.rbi.org.in** ನಲ್ಲಿ ಲಭ್ಯವಿದೆ.

ವಾಸಾಇ/ಬೆಂ.ನ/18/ಎಂಸಿಎ/2020-21

KARNATAKA NEERAVARI NIGAM LIMITED

(Government of Karnataka Enterprises)
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಟಕಾನಿ ವಿಭಾಗ ನಂ. 2, ಹಿಡಕಲ್ ಡ್ಯಾಂ Office Tel. No. 08333-263242/ Fax No. 08333-263405 /e-mail: eegrbc2@gmail/eegrbc2@yahoo.com

ಕ್ರಸಂ:ಕಾಇಂ/ಕನೀನಿನಿ/ಘಬದಂಕಾನಿ ನಂ.2/ಡಿಬಿ/ದರವಿಚಾರಣೆ/2020–21/1269 ದಿನಾಂಕ:21–08–2020

: ದರ ವಿಚಾರಣೆ ಅಧಿಸೂಚನೆ :

ಕೆಳಗೆ ಸಹಿ ಮಾಡಿದ ಕಾರ್ಯಪಾಲಕ ಅಭಿಯಂತರರ ಕಛೇರಿ, ಕನೀನಿನಿ ಘಬದಂಕಾನಿ ವಿಭಾಗ ನಂ. 2 ಹಿಡಕಲ್–ಡ್ಯಾಮ – 591107 ಇವರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಾಲ್ಕನೇ ಮಹಡಿ, ಕಾಫಿ ಬೋರ್ಡ ಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ ವೀಧಿ ಬೆಂಗಳೂರು – 560001, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳ ಅಂದಾಜು ಪತ್ರಿಕೆಗಳಲ್ಲಿ ದರಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ಎಲ್ಲಾ ತೆರಿಗೆಗಳನ್ನೊಳಗೊಂಡ ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯಲ್ಲಿ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ ಈ ದರ ವಿಚಾರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

Sl No.	Name of work
1	Repairs to Head work gates of Block no 8,12 and 13 of CBC Branch canal
2	Repairs to Head work & gates of Kochari flow Dy @ Ch 0+750, 1+330 & 2+025

ಆಸಕ್ತಿಯುಳ್ಳ ಅರ್ಹತೆ ಹೊಂದಿದ ನೊಂದಾಯಿತ ಏಜೆನ್ಸಿ / ಅನುಭವವುಳ್ಳ ಗುತ್ತಿಗೆದಾರರು ಪ್ರತ್ಯೇಕವಾಗಿ ದಿನಾಂಕ: 29–08–2020 ರ ಸಂಜೆ 4–00 ಗಂಟೆಯೊಳಗಾಗಿ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ಮೇಲಿನ ವಿಳಾಸದ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ. ದರ ಕೋರಿರುವ Item ಗಳ ವಿವರಗಳನ್ನೊಂಡ ಪಟ್ಟಿಯ ನಮೂನೆಯು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿ ಉಪ ವಿಭಾಗ ನಂ. 13, ಹಿಡಕಲ್ ಡ್ಯಾಂ ಇವರ ಕಛೇರಿಯಲ್ಲಿ ಲಭ್ಯವಿರುವುದು. ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರನ್ನು ಮತ್ತು ಮೇಲೆ ತಿಳಿಸಲಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ರವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿಯಾಗಲಿ ಅಥವಾ ದೂರವಾಣಿ ಸಂ: 08333–263242 ಮುಖಾಂತರವಾಗಲಿ ಸಂಪರ್ಕಿಸಿ ಪಡೆಯಬಹುದಾಗಿದೆ ಹಾಗು ದರಗಳನ್ನು ಮೇಲೆ ತಿಳಿಸಲಾದ ಈ ಕಛೇರಿಯ ಇ–ಟಚಿಟ ಮುಖಾಂತರ ಸಹ ನಿಗದಿತ ದಿನಾಂಕದೊಳಗೆ ಸಲ್ಲಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಬದಂಕಾನಿ ವಿಭಾಗ ನಂ.2 ಹಿಡಕಲ್–ಡ್ಯಾಮ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ಆಯುಕ್ತರವರ ಕಛೇರಿ, ಪಶ್ಚಿಮ ವಲಯ, ಕಲ್ಯಾಣ ಇಲಾಖೆ,
ಸಂಪಿಗೆ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–560 020

ಸಂಖ್ಯೆ: ಕ.ಅ(ಪ)/ಪಿಆರ್/218/2020–21 ದಿನಾಂಕ: 19.08.2020

ಸಾರ್ವಜನಿಕ ಪ್ರಕಟಣೆ

ವಿಷಯ: 2020–21ನೇ ಸಾಲಿನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳ ಮೀಸಲು ನಿಧಿ ಅನುದಾನದಡಿಯಲ್ಲಿ ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ, ವಾರ್ಡ್– 43, 44, 67, 68, 102, 74, 75 ಹಾಗೂ 97, 66, 76, 127, 128, 120, 138, 105, 106, 107, 100ರ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ

ಉಲ್ಲೇಖ: ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 03.02.2020, 26.06.2020, 13.07.2020ರಂದು ನಡೆದ ಸುಮೋಟೋ ನಿರ್ಣಯದ ನಡಾವಳಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2020–21ನೇ ಸಾಲಿನ ಪಶ್ಚಿಮ ವಲಯದ ವಾರ್ಡ್– 43, 44, 67, 68, 102, 74, 75 ಹಾಗೂ 97, 66, 76, 127, 128, 120, 138, 105, 106, 107, 100ರ ವ್ಯಾಪ್ತಿಗೆ ಸಂಬಂಧಪಟ್ಟಂತೆ, 20201–21ನೇ ಸಾಲಿನ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸದಸ್ಯರುಗಳ ಮೀಸಲು ನಿಧಿ ಅನುದಾನದಡಿಯಲ್ಲಿ ಕಲ್ಯಾಣ ಇಲಾಖೆ ವತಿಯಿಂದ ಈ ಕೆಳಕಂಡ ಕಲ್ಯಾಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು, ಸದರಿ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಮಾತ್ರ ವಾಸಿಸುತ್ತಿರುವ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು ಹಾಗೂ ಸಾಮಾನ್ಯ ವರ್ಗದ ಸಮುದಾಯದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಲ್ಯಾಣ ಕಾರ್ಯಕ್ರಮಗಳ ವಿವರ
1	ಪಾಲಿಕೆ, ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ಪಿ.ಯು.ಸಿ. ಹಾಗೂ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸುವುದು. ಅರ್ಹ ಅಂಗವಿಕಲರಿಗೆ ಆದ್ಯತೆ ನೀಡುವುದು.

ಯೋಜನೆಗಳನ್ನು ಪಡೆಯಲು ಅಭ್ಯರ್ಥಿಗೆ ಇರಬೇಕಾದ ಅರ್ಹತೆಗಳು ಹಾಗೂ ಮಾನದಂಡಗಳು:–

ಕ್ರ. ಸಂ.	ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳ ವಿವರ
1.	ಅರ್ಜಿದಾರರು ಪಶ್ಚಿಮ ವಲಯದ ವಾರ್ಡ್– 43, 44, 67, 68, 102, 74, 75 ಹಾಗೂ 97, 66, 76, 127, 128, 120, 138, 105, 106, 107, 100ರ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು.
2	ಒಂದು ಕುಟುಂಬದಲ್ಲಿ ಒಂದು ಯೋಜನೆಗೆ ಒಬ್ಬರು ಮಾತ್ರ ಅರ್ಹರಾಗಿರುತ್ತಾರೆ.
3	ಸದರಿ ಕಾರ್ಯಕ್ರಮಗಳ ಯೋಜನೆಗೆ ನಿಗಧಿಪಡಿಸಿರುವ ಅಭ್ಯರ್ಥಿಗಳ ವಯೋಮಿತಿ ಪರಿಶಿಷ್ಟ ಜಾತಿ / ಪಂಗಡದವರಿಗೆ, ಹಿಂದುಳಿದ / ಅಲ್ಪ ಸಂಖ್ಯಾತ ವರ್ಗದವರಿಗೆ ಕನಿಷ್ಟ 18 ವರ್ಷಗಳ ವಯೋಮಿತಿ ಹೊಂದಿರಬೇಕು.
4	ಲ್ಯಾಪ್‌ಟಾಪ್ ಸೌಲಭ್ಯವನ್ನು ಪಡೆಯಲು ಅಭ್ಯರ್ಥಿಗಳು ಪಿಯುಸಿ ಹಾಗೂ ಪ್ರಸ್ತುತ ಉನ್ನತ ವ್ಯಾಸಂಗ (ಪದವಿ) ಮಾಡುತ್ತಿರುವ ಬಗ್ಗೆ ವ್ಯಾಸಂಗದ ಮೂಲ ಪ್ರಮಾಣ ಪತ್ರ, ಕಾಲೇಜು ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು.
5	ಪರಿಶಿಷ್ಟ ಜಾತಿ / ಪಂಗಡದವರಿಗೆ, ಹಿಂದುಳಿದ / ಅಲ್ಪ ಸಂಖ್ಯಾತ ವರ್ಗದವರಿಗೆ ತಹಶೀಲ್ದಾರ್‌ರವರಿಂದ ಗಣಕೀಕೃತ ಜಾತಿ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಲ್ಯಾಪ್‌ಟಾಪ್‌ನ ಸೌಲಭ್ಯಗಳನ್ನು ಪಡೆಯಲು ರೂ. 2.00 ಲಕ್ಷಗಳ ಮೀರದೆ ವಾರ್ಷಿಕ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು. (ವಿದ್ಯಾಭ್ಯಾಸಕ್ಕೆ ಎಲ್ಲಾ ಅಭ್ಯರ್ಥಿಯ ಹೆಸರಿನಲ್ಲಿ ಪರಿಶಿಷ್ಟ ಜಾತಿ / ಪಂಗಡ, ಹಿಂದುಳಿದ / ಅಲ್ಪ ಸಂಖ್ಯಾತ ವರ್ಗದವರ ಆದಾಯ ಪ್ರಮಾಣ ಪತ್ರವಿರಬೇಕು)
6	ಅರ್ಜಿದಾರರು ವಯೋಮಿತಿ ದೃಡೀಕರಿಸಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ / ಶಾಲಾ–ಕಾಲೇಜಿನ ವರ್ಗಾವಣೆ ಪ್ರಮಾಣ ಪತ್ರ / ಜನನ ಪ್ರಮಾಣ ಪತ್ರದ ಪ್ರತಿ ಲಗತ್ತಿಸಬೇಕು.
7	ಅಭ್ಯರ್ಥಿಗಳು ಅರ್ಜಿಯೊಂದಿಗೆ 3 ಇತ್ತೀಚಿನ ಭಾವಚಿತ್ರ, ಯೋಜನೆಗೆ ನಿಗಧಿಪಡಿಸಿದ ವಿದ್ಯಾರ್ಹತೆಯ ದಾಖಲೆಗಳು, ವಾಸಸ್ಥಳ ದೃಡೀಕರಣ ಪತ್ರಗಳಾದ ಮತದಾರರ ಗುರುತಿನ ಚೀಟಿ / ಪಡಿತರ ಚೀಟಿ / ಅಡಿಗೆ ಅನಿಲ ರಶೀದಿ / ಪರವಾನಿಗೆ ಪ್ರತಿಯನ್ನು ಸಲ್ಲಿಸಬೇಕು.
8	ಅಭ್ಯರ್ಥಿಗಳು ಅರ್ಜಿಯೊಂದಿಗೆ ಲಗತ್ತಿಸಿರುವ ಎಲ್ಲಾ ದಾಖಲೆಗಳನ್ನು (ಜೆರಾಕ್ಸ್ ಪ್ರತಿಗಳನ್ನು) ಗೆಜೆಟೆಡ್ ಅಧೀಕಾರಿಯಿಂದ ಅಥವಾ ನೋಟರಿಯವರಿಂದ ದೃಡೀಕರಿಸಿ ಸಲ್ಲಿಸಬೇಕು
9	ಆರ್ಥಿಕ ಸಹಾಯ ಕೋರಿ ಸಲ್ಲಿಸುವ ಅರ್ಜಿದಾರರು ಈ ಹಿಂದೆ ಸರ್ಕಾರ / ಸರ್ಕಾರೇತರ ಸಂಸ್ಥೆಗಳಿಂದ ಉಚಿತವಾಗಿ / ಸಾಲದ ಮುಖಾಂತರ ಇಂತಹ ಯಾವುದೇ / ಸವಲತ್ತುಗಳನ್ನು ಪಡೆದಿಲ್ಲವೆಂದು ರೂ. 20/–ರ ಛಾಪ ಕಾಗದದಲ್ಲಿ ಮುಚ್ಚಳಿಕೆ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
10	ಮೇಲ್ಕಂಡಂತೆ ಆಯೋಜಿಸಿರುವ ಕಲ್ಯಾಣ ಕಾರ್ಯಕ್ರಮಗಳಿಗೆ / ಯೋಜನೆಗಳಿಗೆ ಪಾಲಿಕೆಯು ಹೊರಡಿಸಿರುವ ಮಾರ್ಗಸೂಚಿಗಳ ಮಾನದಂಡಗಳನ್ವಯ ಫಲಾನುಭವಿಗಳನ್ನು ಆಯ್ಕೆ ಮಾಡುವುದರಿಂದ ಸೌಲಭ್ಯಗಳನ್ನು ಪಡೆಯಲು ಹೆಚ್ಚಿನ ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ ಪಶ್ಚಿಮ ವಲಯ ಕಲ್ಯಾಣ ವಿಭಾಗಕ್ಕೆ ಸಂಪರ್ಕಿಸಿ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಅರ್ಜಿಯನ್ನು ಸಲ್ಲಿಸುವುದು.
11	ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ / ಪಾಲಿಕೆಯು ಆಗಿಂದ್ದಾಗೆ ಹೊರಡಿಸುವ ಸುತ್ತೋಲೆ / ಮಾರ್ಗಸೂಚಿಗಳಿಗೆ ಅನುಗುಣವಾಗಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುವುದು.

ಅರ್ಜಿ ಸಲ್ಲಿಸಲು ಇಚ್ಛಿಸುವವರು ಪಾಲಿಕೆಯ ಅಂತರ್ಜಾಲವಾದ **www.bbmp.gov.in** ರಲ್ಲಿ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿ, ಎಲ್ಲಾ ದಾಖಲಾತಿಗಳೊಂದಿಗೆ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 07 ದಿನಗಳ ಕಾಲಾವಕಾಶವಿದ್ದು, ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯದ ಕಲ್ಯಾಣ ಇಲಾಖೆಯಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಕಲ್ಯಾಣಾಧಿಕಾರಿಗಳು, ಕಲ್ಯಾಣ ಇಲಾಖೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಪಶ್ಚಿಮ ವಲಯ, ಸಂಪಿಗೆ ರಸ್ತೆ, ಭಾಷ್ಯಂ ಪಾರ್ಕ್, ಶೇಷಾದ್ರಿಪುರಂ, ಬೆಂಗಳೂರು–560020 ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಜಂಟಿ ಆಯುಕ್ತರು (ಪಶ್ಚಿಮ), ಬಿಬಿಎಂಪಿ

"ಸುಧಾರಣಾ ವೆಚ್ಚ ಪಾವತಿಸಿ, ಬೆಂಗಳೂರಿನ ಅಭಿವೃದ್ಧಿಗೆ ಸಹಕರಿಸಿ"

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110

ಸಂ. ಬಿಐಎಎಪಿಎ/ಟಿಪಿ/ಎಂಐಎಸ್/ಅನಧಿಕೃತ/03/2020–21/549 ದಿನಾಂಕ : 20–08–2020

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 142 ಎಂಎನ್‌ಎಕ್ಸ್ 95 ದಿನಾಂಕ: 12–01–1996 ರಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿರುತ್ತದೆ. ಪ್ರಸ್ತುತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ದೇವನಹಳ್ಳಿ ತಾಲ್ಲೂಕಿನ ಕಸಬಾ, ವಿಜಯಪುರ, ಕುಂದಾಣ ಮತ್ತು ಚನ್ನರಾಯಪಟ್ಟಣ ಹೋಬಳಿಗಳ 185 ಗ್ರಾಮಗಳು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನ ಜಾಲ ಹೋಬಳಿಯ 43 ಗ್ರಾಮಗಳು ಸೇರಿ ಒಟ್ಟು 228 ಗ್ರಾಮಗಳನ್ನು ಒಳಗೊಂಡಿದ್ದು, 451 ಚ.ಕಿ.ಮೀ ವಿಸ್ತೀರ್ಣ ಇರುತ್ತದೆ. ಸ್ಥಳೀಯ ಯೋಜನಾ ಪ್ರದೇಶದಲ್ಲಿ ವಿಜಯಪುರ ಮತ್ತು ದೇವನಹಳ್ಳಿ ಪುರಸಭೆಗಳ ವ್ಯಾಪ್ತಿ ಒಳಗೊಂಡಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ ನಅಇ 157 ಬಿಎಂಆರ್ 2005 ರ ದಿ: 27–01–2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29–01–2009 ರಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ–2021 ಅನ್ನು ಅನುಮೋದಿಸಲಾಗಿರುತ್ತದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಮತ್ತು ಸರ್ವೆ ಸಂಖ್ಯೆಗಳ ವಿವರ ಅಧಿಸೂಚನೆಗಳು ಹಾಗೂ ಮಹಾಯೋಜನೆಯ ನಕ್ಷೆಗಳನ್ನು ಪ್ರಾಧಿಕಾರದ ವೆಬ್‌ಸೈಟ್ www.biaapa.tpa.gov.in ರಲ್ಲಿ ಪರಿಶೀಲಿಸಬಹುದಾಗಿದೆ.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಈ ಯೋಜನಾ ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14, 15 & 17 ರಂತೆ ಕ್ರಮವಾಗಿ ಭೂ ಉಪಯೋಗ ಬದಲಾವಣೆ ಕಟ್ಟಡ ನಿರ್ಮಾಣ ಮತ್ತು ಬಡಾವಣೆ ರಚಿಸಲು ಪೂರ್ವಾನುಮತಿ ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಯೋಜನಾ ಪ್ರಾಧಿಕಾರದ ಅನುಮೋದನೆ ಇಲ್ಲದೇ ಇತರೇ ಯಾವುದಾದರೂ ಅನುಮೋದನೆ ಆಧಾರದ ಮೇಲೆ ನಿರ್ಮಾಣ ಕೈಗೊಂಡಿದ್ದರೆ ಅಂತಹ ನಿರ್ಮಾಣ ಕಾರ್ಯಗಳು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 76–ಎಂ(2)(ಬಿ) ರಂತೆ ಊರ್ಜಿತವಾಗುವುದಿಲ್ಲ.

ಈ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವಿಜಯಪುರ ಪುರಸಭೆಯ ಹಾಗೂ ದೇವನಹಳ್ಳಿ ಪುರಸಭೆಯ ಕಾರ್ಯ ವ್ಯಾಪ್ತಿಯನ್ನು ಒಳಗೊಂಡಿದ್ದು, ಸದರಿ ಪ್ರದೇಶಗಳಲ್ಲಿ ಈ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಪಡೆಯದೇ ಬಡಾವಣೆ ನಿರ್ಮಿಸಿದಲ್ಲಿ, ಅಂತಹ ನಿವೇಶನಗಳಲ್ಲಿ ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 187(3)(ಡಿ)(1)ರಂತೆ ಕಟ್ಟಡ ಪರವಾನಿಗೆ ನೀಡುವಾಗ ಸದರಿ ನಿವೇಶನದ ಉಪಯೋಗ ಮತ್ತು ಇತರೆ ವಿವರಗಳು ಇತರೆ ಯಾವುದೇ ಕಾಯ್ದೆಯಲ್ಲಿನ ಅವಕಾಶಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಅಂತಹ ನಿವೇಶನಗಳಿಗೆ ಕಟ್ಟಡ ಪರವಾನಿಗೆ ನಿರಾಕರಿಸುವಂತೆ ಉಲ್ಲೇಖಿಸಲಾಗಿದೆ.

ಈ ಸ್ಥಳೀಯ ಯೋಜನಾ ಪ್ರದೇಶದ ಉಳಿದ ಪ್ರದೇಶದಲ್ಲಿ ಇರುವ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಈ ಯೋಜನಾ ಪ್ರಾಧಿಕಾರದಿಂದ ಕಲಂ 14, 15, 17 ರಡಿಯಲ್ಲಿ ಅನುಮೋದನೆ ಪಡೆದು ಕ್ರಮವಹಿಸಬೇಕಾಗಿದ್ದು, ಒಂದು ವೇಳೆ ಈ ಪ್ರಾಧಿಕಾರದ ಪೂರ್ವಾನುಮೋದನೆ ಪಡೆಯದೇ ಅಭಿವೃದ್ಧಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರಡಿಯಲ್ಲಿ ನಿಯಮಾನುಸಾರ ಕ್ರಮ ವಹಿಸುವುದರ ಜೊತೆಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರ ಕಲಂ 64 (5–ಎ) ರಲ್ಲಿ ಗ್ರಾಮ ಪಂಚಾಯಿತಿಯು ನೀಡುವ ಯಾವುದೇ ಅನುಮೋದನೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಾಯ್ದೆಯ ಅವಕಾಶಗಳ ಉಲ್ಲಂಘನೆಯಾದಲ್ಲಿ ದುರ್ನಡತೆಯೆಂದು ಅರ್ಥೈಸಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿ ಅಥವಾ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮಕ್ಕೆ ಹೊಣೆಗಾರರಾಗುತ್ತಾರೆ ಎಂದು ಉಲ್ಲೇಖಿಸಲಾಗಿದೆ.

ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ನಿರ್ಮಿಸಲಾಗುವ ವಸತಿ ಬಡಾವಣೆಗಳಿಗೆ ಯೋಜನಾ ಪ್ರಾಧಿಕಾರದಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17 ರ ಅಡಿಯಲ್ಲಿ ಮೊದಲನೇ ಹಂತದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ ತಾತ್ಕಾಲಿಕ ಅನುಮೋದನೆ ಮಾತ್ರ ನೀಡಲಾಗುತ್ತದೆ. ನಂತರದಲ್ಲಿ ಅನುಮೋದಿತ ತಾತ್ಕಾಲಿಕ ವಿನ್ಯಾಸದಂತೆ ಸ್ಥಳದಲ್ಲಿ ಅಭಿವೃದ್ಧಿಪಡಿಸಿ ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರವೇ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡಿ ವಸತಿ ನಿವೇಶನಗಳನ್ನು ಮಾರಾಟಕ್ಕೆ ಬಿಡುಗಡೆಗೊಳಿಸಲಾಗುತ್ತದೆ. ಈ ರೀತಿ ಯೋಜನಾ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ಪಡೆದು ವಸತಿ ನಿವೇಶನಗಳನ್ನು ಬಿಡುಗಡೆಗೊಳಿಸಿದ ಅನುಮೋದಿತ ವಸತಿ ವಿನ್ಯಾಸಗಳಲ್ಲಿ ಸಾರ್ವಜನಿಕರು ವಸತಿ ನಿವೇಶನಗಳನ್ನು ಖರೀದಿಸಬಹುದಾಗಿರುತ್ತದೆ.

ಹಾಗಾಗಿ, ಸಾರ್ವಜನಿಕರು ವಸತಿ ನಿವೇಶಗಳನ್ನು ಖರೀದಿಸುವಾಗ ಯೋಜನಾ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ಪಡೆದು ವಸತಿ ನಿವೇಶನಗಳನ್ನು ಬಿಡುಗಡೆ ಮಾಡಿರುವ ಬಗ್ಗೆ ಪರಿಶೀಲಿಸಿಕೊಂಡು ಅನುಮೋದಿತ ವಸತಿ ವಿನ್ಯಾಸದಲ್ಲಿ ಇರುವ ನಿವೇಶನಗಳನ್ನು ಮಾತ್ರ ಖರೀದಿಸಲು ಹಾಗೂ ಯಾವುದೇ ಕಾರಣಕ್ಕೂ ಈ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಲಾಗಿರುವ ವಸತಿ ವಿನ್ಯಾಸದಲ್ಲಿನ ನಿವೇಶನಗಳನ್ನು ಖರೀದಿಸದಂತೆ ಎಚ್ಚರವಹಿಸಲು ತಿಳಿಸಲಾಗಿದೆ. ಈ ರೀತಿ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ನಿವೇಶನ ಬಿಡುಗಡೆ ಬಗ್ಗೆ ಖಚಿತಪಡಿಸಿಕೊಳ್ಳದೇ, ಅನಧಿಕೃತ ನಿವೇಶನಗಳನ್ನು ಸಾರ್ವಜನಿಕರು ಖರೀದಿಸಿದಲ್ಲಿ, ಮೂಲಭೂತ ಸೌಲಭ್ಯಗಳು ಹಾಗೂ ನಿರ್ವಹಣೆಯಿಂದ ವಂಚಿತರಾಗುವುದಲ್ಲದೇ, ಇಂತಹ ಅನಧಿಕೃತ ನಿವೇಶನಗಳಲ್ಲಿ ನಿಯಮಾನುಸಾರ ಕಟ್ಟಡ ನಕ್ಷೆ ಅನುಮೋದನೆ ಪಡೆಯಲೂ ಸಹ ಸಾಧ್ಯವಾಗುವುದಿಲ್ಲ, ಆದ ಕಾರಣ, ಮುಂದಿನ ತೊಂದರೆ/ಅಡಚಣೆ ಆಗುಹೋಗುಗಳಿಗೆ ತಾವೇ ಸ್ವತಃ ಜವಾಬ್ದಾರರಾಗಲಿದ್ದು, ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ ಅಲ್ಲದೇ ಅಧಿಕೃತ ಬಡಾವಣೆಗಳಲ್ಲಿನ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಕೈಗೊಳ್ಳುವ ಮುನ್ನ ಈ ಪ್ರಾಧಿಕಾರದಿಂದ ಕಡ್ಡಾಯವಾಗಿ ಕಟ್ಟಡ ನಕ್ಷೆ ಅನುಮೋದನೆ ಪಡೆಯತಕ್ಕದ್ದೆಂದು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಲಾಗಿದೆ.

ಸ್ಥಳೀಯ ಯೋಜನಾ ಪ್ರದೇಶ ವ್ಯಾಪ್ತಿಯಲ್ಲಿ ಭೂಮಾಲೀಕರು/ಅಭಿವೃದ್ಧಿದಾರರು ಕಾಯ್ದೆ/ನಿಯಮಾವಳಿಯಂತೆ ಅನುಮೋದನೆ ಪಡೆಯದೇ ವಿನ್ಯಾಸಗಳನ್ನು ಅಭಿವೃದ್ಧಿಪಡಿಸಬಾರದೆಂದೂ, ಅನಧಿಕೃತವಾಗಿ ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಕಂಡುಬಂದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965 ರಡಿಯಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ಸಂಬಂಧಿತ ಭೂಮಾಲೀಕರು/ಅಭಿವೃದ್ಧಿದಾರರ ಗಮನಕ್ಕೆ ತಿಳಿಯಪಡಿಸಲಾಗಿದೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ.

ವಾಸಾಸಂಇ/ಬೆಂ.ಗ್ರಾ/143/MAA Comm/2020-21

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಪ್ರಕಟಣೆ

ಬೆ.ವಿ.ಕಂ ವಿಚಾರಣೆ ಸಂಖ್ಯೆ: **ಪ್ರವ್ಯ(ಆ&ಮಾ.ಸಂ)/ಬಿಸಿ–50/2535/2/2020–21, ದಿನಾಂಕ: 21.08.2020**ರ ಮೂಲಕ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯಲ್ಲಿನ ಎಲ್ಲಾ ಅಧಿಕಾರಿ/ನೌಕರರುಗಳಿಗೆ ಒಂದು ವರ್ಷದ ಅವಧಿಗೆ ವೈಯುಕ್ತಿಕ ಅಪಘಾತ ಗುಂಪು ವಿಮಾ ಯೋಜನೆಗಾಗಿ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ದಾಸ್ತಾವೇಜು ಸ್ವೀಕೃತಿಗೆ ಕೊನೆಯ ದಿನಾಂಕ: **31.08.2020** ರಂದು **16.00** ಗಂಟೆವರೆಗೆ. ಬಿಡ್ ತೆರೆಯುವಿಕೆ: **01.09.2020** ರಂದು **16.30**ಗಂಟೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿ/ವಿಚಾರಣೆ ಬಗ್ಗೆ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: **http://eproc.karnataka.gov.in**ನಲ್ಲಿ ಪ್ರಕಟಿಸಲಾಗಿದೆ.

- ಇ–ಪಾವತಿ ಸಂಬಂಧಿತ ವಿಚಾರಣೆಗಾಗಿ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ಸಂಪರ್ಕಿಸುವುದು.
- ಟೆಂಡರ್ ಸಂಬಂಧಿತ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **080–22258788** ಸಂಪರ್ಕಿಸುವುದು.

ವಿದ್ಯುತ್ ಸಂಬಂಧಿತ ದೂರಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ)
ಬೆವಿಕಂ, ಬೆಂಗಳೂರು.

ಕರ್ನಾಟಕ ರಾಜ್ಯ ಡ್ರಗ್ಸ್ ಲಾಜಿಸ್ಟಿಕ್ಸ್ ಅಂಡ್ ವೇರ್ ಹೌಸಿಂಗ್ ಸೊಸೈಟಿ(ನೋಂ).

#1, ಡಾ॥ ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079.
ದೂರವಾಣಿ ಸಂಖ್ಯೆ: +91–80–23283218 ಫ್ಯಾಕ್ಸ್: +91–80–23281477
ಮಿಂಚ್ ಅಂಚೆ: ad.kdlws@gmail.com, csdrugs@gmail.com

No: KDL/AD/Covid/Inj-Remdesivir/Quotation/53/2020-21 Date: 21.08.2020

ದರಪಟ್ಟಿ ಪ್ರಕಟಣೆ

ಉಲ್ಲೇಖ: 1. ದರಪಟ್ಟ ಅಧಿಸೂಚನೆ ಸಂಖ್ಯೆ: **KDL/AD/Covid/Inj-Remdesivir/ Quotation/53/ 2020-21 Dated: 21.08.2020.** 2. ದರಪಟ್ಟ ಅಧಿಸೂಚನೆ ಸಂಖ್ಯೆ: **KDL/EQPT/COVID-19/ CBNAAT Cartridge/84/2020-21 dated:21/08/2020.** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರ 4(ಎ) ಅಡಿಯಲ್ಲಿ ಈ ಕೆಳಕಂಡ ಔಷಧ ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲು ದರಪಟ್ಟಿಗಳನ್ನು ರಾಷ್ಟ್ರವ್ಯಾಪ್ತಿಯಲ್ಲಿ ಕರೆಯಲಾಗಿದೆ. **1. Quotation for supply of Inj. Remdesivir. 2. Quotation for supply of CBNAAT Xpert Xpress SARS Co-V cartridge** ಕೆ.ಎಸ್.ಡಿ.ಎಲ್.ಡಬ್ಲ್ಯೂ.ಎಸ್ ವೆಬ್‌ಸೈಟ್ ಮುಖಾಂತರ: **http://www.kdlws.kar.nic.in/** ನಲ್ಲಿ ತಾಂತ್ರಿಕ ವಿವರಣೆ, ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ದಿನಾಂಕ: 21/08/2020 ರಿಂದ 25/08/2020 ಒಳಗಾಗಿ ಪಡೆಯಬಹುದು. ಅರ್ಹ ಸಂಸ್ಥೆಗಳು ನಿರ್ದೇಶಕರು, ಕೆ.ಎಸ್.ಡಿ.ಎಲ್.ಡಬ್ಲ್ಯೂ.ಎಸ್, #1, ಡಾ॥ ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ. ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು–560 079 ರವರ ಹೆಸರಿನಲ್ಲಿ ಮುಚ್ಚಿದ ಲಕೋಟೆಯಲ್ಲಿ ಅಥವಾ ಆನ್‌ಲೈನ್ ಮೂಲಕ ದರಪಟ್ಟಿಯನ್ನು **Password Protected PDF** ನಲ್ಲಿ ಇ–ಮೇಲ್ ಐಡಿ **ksdlwscovid-19.procurement@gmail.com** ಗೆ ದಿನಾಂಕ: **21/08/2020** ರಿಂದ 25/08/2020 ರವರೆಗೆ ಸಂಜೆ 5 ಗಂಟೆಯೊಳಗೆ ದರಪಟ್ಟಿಗಳನ್ನು ಸಲ್ಲಿಸಬಹುದು.

ಸಹಿ/– ಆಯುಕ್ತರು,
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ಮತ್ತು
ನಿರ್ದೇಶಕರು. ಕೆ.ಎಸ್.ಡಿ.ಎಲ್.ಡಬ್ಲ್ಯೂ.ಎಸ್.

ವಾಸಾಸಂಇ/ಬೆಂ.ನ./JA/2020–21

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರ ಕಛೇರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಯೋಜನಾ ವಿಭಾಗ, ಮಂಡ್ಯ.

ಸಂಖ್ಯೆ:ಕಾಅ:ಗ್ರಾ.ಅ.ಪಂ.ರಾ.ಯೋವಿ:ಮಂಡ್ಯ:ಟೆಂಪ್ರ:ಸಇಂ:2020–21/345
ದಿನಾಂಕ:19.08.2020

ಅಲ್ಪಾವಧಿ ಟೆಂಡರ್ ಪಕಟಣೆ ಸಂಖ್ಯೆ: 01/2020–21 (e-procurement portal)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಮಂಡ್ಯ ರವರು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ 2018–19ನೇ ಸಾಲಿಗೆ ಆರ್ಥಿಕ ಪ್ರೋತ್ಸಾಹಧನ ಯೋಜನೆಯಡಿಯಲ್ಲಿ ಮಂಡ್ಯ ಜಿಲ್ಲೆಯ ಗ್ರಾಮೀಣ ರಸ್ತೆ ಅಭಿವೃದ್ಧಿಪಡಿಸಲು ಕೆಪಿಡಬ್ಲ್ಯೂಡಿ/ಸಿಪಿಡಬ್ಲ್ಯೂಡಿನಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಹಾಗೂ ಪಿಆರ್‌ಇಡಿಯಲ್ಲಿ ನೋಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗೆ (ದ್ವಿ ಲಕೋಟೆ ಪದ್ಧತಿ) ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂ ದರದ ಟೆಂಡರ್‌ನ್ನು ಕೆಳಕಂಡಂತೆ ಆಹ್ವಾನಿಸಲಾಗಿದೆ.

CALENDER OF TENDER EVENTS:- Accessing the bid document e-procurement portal form : **24.08.2020.** Last Date & Time for Tender Queries/Clarifications : **05.09.2020 Up to 5.30 PM.** Last Date & Time for receipt of tenders : **07.09.2020 Up to 4.30 PM.** Date & Time for Opening of tenders : **09.09.2020at 11.00 AM (OR) Next working day.**

ಕ್ರ ಸಂ. : **1.** ಕಾಮಗಾರಿಯ ಹೆಸರು : ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ **(1)ಅಣಸಾಲೆಯಿಂದ ಕುರುಬನಪುರ, (2)ಬಸವನಹಳ್ಳಿಯಿಂದ ಟಿ–03, (3) ದಬ್ಬಳ್ಳಿಯಿಂದ ಟಿ–11, (4) ದೇಶವಳ್ಳಿಯಿಂದ ಟಿ–03, (5) ತಾಳೇಹಳ್ಳದಿಂದ ಟಿ–03, (6) ತೆಂಕಹಳ್ಳಿಯಿಂದ ಟಿ–07, (7) ಕೊನ್ನಾಪುರದೊಡ್ಡಿಯಿಂದ ಟಿ–04, (8) ಹಣಕೋಲದಿಂದ ಟಿ–09, (9) ಹೊನಗನಹಳ್ಳಿಯಿಂದ ಟಿ–10ವರೆಗಿನ ರಸ್ತೆಯ ಆವರ್ತಕ ನಿರ್ವಹಣೆ ಕಾಮಗಾರಿ. ಉದ್ದ: 28.79ಕಿ.ಮೀ (ಪ್ಯಾಕೇಜ್ ಸಂಖ್ಯೆ ಕೆಎನ್‌ಎಂಆರ್ 21–02).** ಟೆಂಡರ್‌ಗೆ ಇಡಲಾದ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : **266.22.** ಇ.ಎಂ.ಡಿ. ಮೊತ್ತ (ರೂ. ಲಕ್ಷಗಳಲ್ಲಿ) : **5.35.** ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ (ಮಳೆಗಾಲ ಸೇರಿ) : **04** ತಿಂಗಳು. ಅರ್ಹದಾಯಕ ಗುತ್ತಿಗೆದಾರರ ದರ್ಜೆ (Class of contractor) : **Class-I.**

ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ, ಯೋಜನಾ ವಿಭಾಗ,ನಂ:1865, ಕೆ.ಆರ್.ರಸ್ತೆ, 6ನೇ ಕ್ರಾಸ್, ಸುಭಾಷ್ ನಗರ ಮಂಡ್ಯ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. **ದೂರವಾಣಿ ಸಂಖ್ಯೆ: 08232–228899** ಇ–ಮೇಲ್ : **Kn-Mandya@pmgsy.nic.in& eepmgsymandya@gmail.com.**

ಸಹಿ/–ಕಾರ್ಯಪಾಲಕ ಅಭಿಯಂತರರು, ಯೋಜನಾ. ವಿಭಾಗ, ಮಂಡ್ಯ.

DIPR/AD-MDY/MCA/302/2020-21

COFFEE DAY ENTERPRISES LTD.

Brewing new possibilities.

Registered and Corporate Office: 23/2, Coffee Day Square, Vittal Mallya Road, Bengaluru 560 001, Karnataka, India;
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

For the Quarter and Nine-Months Ended 31st December 2019

(₹ in Crores except per share data)

Particulars	Quarter ended 31st December, 2019 (Unaudited)	Nine Month ended 31st December, 2019 (Unaudited)	Quarter ended 31st December, 2018 (Unaudited)
Total income from operations (net)	591.21	2,158.95	907.68
Net Profit from ordinary activities after tax	(163.95)	1,293.73	73.52
Net Profit for the period after tax (after Extraordinary items)			
Equity Share Capital	211.25	211.25	211.25
Reserves (excluding Revaluation Reserve as shown in the Balance Sheet of previous year)			
Earnings Per Share (before extraordinary items) (of ₹ 10/- each)			
Basic :	(6.66)	61.54	3.01
Diluted :	(6.66)	61.54	3.01
Earnings Per Share (after extraordinary items) (of ₹ 10/- each)			
Basic :	(6.66)	61.54	3.01
Diluted :	(6.66)	61.54	3.01

Notes:

1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 21st August, 2020 and have been subjected to the Limited review by the Statutory Auditors of the Company.
3. **Un-audited financial results of Coffee Day Enterprises Limited (Standalone Information)** *(₹ in Crores)*

Particulars	Quarter ended 31st December, 2019 (Unaudited)	Nine Month ended 31st December, 2019 (Unaudited)	Quarter ended 31st December, 2018 (Unaudited)
Total income from operations (net)	3.84	19.63	12.20
Loss before tax and exceptional items	(16.63)	(74.79)	(19.23)
Loss / Profit after tax and exceptional items	(14.97)	1,395.28	(19.23)

For and on behalf of the Board of Directors
S.V Ranganath
Interim Chairman and Independent Director
Coffee Day Enterprises Limited

Place : Bengaluru
Date : August 21, 2020

Adfactors 545

ಚಿನ್ನದಾಸೆ ತೋರಿಸಿ ₹25 ಲಕ್ಷ ವಂಚನೆ

ಬೆಂಗಳೂರು: ಗಿರವಿ ಇಟ್ಟ 860 ಗ್ರಾಂ ಒಡವೆ ಬಿಡಿಸಿಕೊಳ್ಳುವಂತೆ ಹೇಳಿ ಬಸವನಗುಡಿಯ ಬೆನಕ ಗೋಲ್ಡ್ ಪ್ರೈ. ಲಿ.ಕಂಪನಿ ಮಾಲೀಕ ಭರತ್ ಕುಮಾರ್‌ಗೆ ವ್ಯಕ್ತಿಯೊಬ್ಬ 25 ಲಕ್ಷ ರೂ. ವಂಚಿಸಿದ್ದಾನೆ.

» ಬಸವನಗುಡಿ ಪೊಲೀಸರಿಗೆ ದೂರು

ಆರೋಪಿಗಳಾದ ಕೊಪ್ಪಳದ ಸೈಯದ್ ಸುಬಾನಿ ಪಾಷಾ ಮತ್ತು ಶರಣ್‌ಗೌಡ ಪಾಟೀಲ್ ಎಂಬುವರ ವಿರುದ್ಧ ಬಸವನಗುಡಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ಕಳೆದ ತಿಂಗಳು ಭರತ್ ಕಚೇರಿಗೆ ಕರೆ ಮಾಡಿದ ಸೈಯದ್, ಕೊಪ್ಪಳದ ಕಾಟರಗಿ ಮಣಪ್ಪುರಂ ಫೈನಾನ್ಸ್‌ನಲ್ಲಿ 860 ಗ್ರಾಂ ಒಡವೆ ಗಿರವಿ ಇಟ್ಟಿದ್ದೇನೆ. ಅದನ್ನು ನೀವೇ ಬಿಡಿಸಿಕೊಳ್ಳಿ. ನನಗೆ 25 ಲಕ್ಷ ರೂ. ಕೊಡಿ ಎಂದು ಮನವಿ ಮಾಡಿದ್ದ. ಕಂಪನಿ ವ್ಯವಸ್ಥಾಪಕ ಮಂಜುನಾಥ್, ಆರೋಪಿ ನೀಡಿದ ವಿಳಾಸಕ್ಕೆ ಪರಿಶೀಲನೆಗೆ ತೆರಳಿ ಶರಣ್ ಗೌಡ ಪಾಟೀಲ್ ಎಂಬಾತನನ್ನು ಭೇಟಿ ಮಾಡಿದ್ದಾರೆ. ಆಗ ಆತ, ಸೈಯದ್ ನನಗೆ ಪರಿಚಿತರು. ಅವರೊಂದಿಗೆ ವ್ಯವಹಾರ ನಡೆಸುತ್ತಿದ್ದೇನೆ ಎಂದು ನಂಬಿಸಿದ್ದ. ಅದನ್ನು ನಂಬಿದ ಭರತ್‌ಕುಮಾರ್, ಸೈಯದ್ ಬ್ಯಾಂಕ್ ಖಾತೆಗೆ 25 ಲಕ್ಷ ರೂ. ಜಮೆ ಮಾಡಿದ್ದಾರೆ. ಆ ನಂತರ ಮಣಪ್ಪುರಂ ಫೈನಾನ್ಸ್ ಕಂಪನಿ ಕಚೇರಿಗೆ ತೆರಳಿ ವಿಚಾರಿಸಿದಾಗ ಚಿನ್ನಾಭರಣ ಗಿರವಿಗೆ ಇಟ್ಟಿಲ್ಲವೆಂದು ಹೇಳಿದ್ದಾರೆ. ಇತ್ತ ಸೈಯದ್ ಕೂಡ ಆಭರಣ ಹಸ್ತಾಂತರ ಮಾಡಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಪರೀಕ್ಷಾರ್ಥಿಗಳಿಗೆ ವಿಶೇಷ ಬಸ್ ಸೇವೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ಆ.24ರಂದು ಗೆಜೆಟ್ ಪ್ರೊಬೇಷನರಿ ಹುದ್ದೆಗಳಿಗೆ ಪೂರ್ವಭಾವಿ ಪರೀಕ್ಷೆ ನಡೆಸುತ್ತಿದ್ದು, ಪರೀಕ್ಷೆಗೆ ಹಾಜರಾಗುವವರಿಗಾಗಿ 23 ಮತ್ತು 24ರಂದು ಕೆಎಸ್‌ಆರ್‌ಟಿಸಿಯಿಂದ ವಿಶೇಷ ಬಸ್ ಸೇವೆ ನೀಡಲಾಗುತ್ತಿದೆ.

» ತಾಲೂಕು, ಜಿಲ್ಲಾ ಕೇಂದ್ರಗಳಿಂದ ಕಾರ್ಯಾಚರಣೆ

ಪ್ರಮುಖ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಿಂದ ಪರೀಕ್ಷೆ ನಡೆಯುವ ಕೇಂದ್ರ ಸ್ಥಾನಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ಬಸ್‌ಗಳು ಕಾರ್ಯಾಚರಣೆಗೊಳ್ಳಲಿವೆ. ಬೆಂಗಳೂರಿಗೆ ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ, ತುಮಕೂರು ಜಿಲ್ಲೆಗಳಿಂದ ಹೆಚ್ಚುವರಿ ಬಸ್‌ಗಳ ಸೇವೆ ನೀಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತೀರ್ಪು ಪ್ರಕಟಣೆ 28ಕ್ಕೆ ಮುಂದೂಡಿಕೆ

ಬೆಂಗಳೂರು: ರಾಜ್ಯದಲ್ಲಿ ಭಾರಿ ಸಂಚಲನ ಸೃಷ್ಟಿಸಿದ್ದ ಡಿವೈಎಸ್‌ಪಿ ಎಂ.ಕೆ. ಗಣಪತಿ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪು ಪ್ರಕಟಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆ.28ಕ್ಕೆ ಮುಂದೂಡಿದೆ. ಈ ಹಿಂದೆ ವಿಚಾರಣೆ ನಡೆಸಿದ್ದ ನ್ಯಾಯಾಲಯ ಆ.20ಕ್ಕೆ ತೀರ್ಪು ಕಾಯ್ದಿರಿಸಿತ್ತು.

» ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣ

ಅಂದು ಕೋರ್ಟ್ ಕಾರ್ಯ ನಿರ್ವಹಿಸದ ಹಿನ್ನೆಲೆಯಲ್ಲಿ ತೀರ್ಪು ಪ್ರಕಟ ಮಾಡಲಾಗಿಲ್ಲ.